# ದೋನಿ ನಿವೃತ್ತಿ?

ಮಹೇಂದ್ರಸಿಂಗ್ ದೋನಿಯನ್ನು ಭಾರತ ಕ್ರಿಕೆಟ್ ತಂಡದಿಂದ ಬಲವಂತವಾಗಿ ಹೊರದಬ್ಬುವ ಯತ್ನ ನಡೆದಿದೆಯೆ? ಹೀಗೊಂದು ಪ್ರಶ್ನೆ ಕ್ರಿಕೆಟ್ ಅಭಿಮಾನಿಗಳ ಮನಸ್ಸಲ್ಲಿ ಎದ್ದಿದೆ. ಕಳೆದ ಆರು ತಿಂಗಳಿಂದ ದೋನಿ ಯಾವುದೇ ಏಕದಿನ ಪಂದ್ಯ, ಟಿ20 ಪಂದ್ಯ ಅಥವಾ ಟೆಸ್ಟ್ ಪಂದ್ಯಗಳಲ್ಲಿ ಆಟವಾಡಿಲ್ಲ. ಶೀಘ್ರವೇ ದೋನಿ ರಾಷ್ಟ್ರೀಯ ಚುಟುಕು ಕ್ರಿಕೆಟ್ ತಂಡದಿಂದ ನಿವೃತ್ತಿ ಆಗುತ್ತಾರೆ ಎಂಬ ಸುದ್ದಿ ಕಳೆದ ವರ್ಷವೇ ಹಬ್ಬಿತ್ತು. ಆದರೆ ದೋನಿ ನಿವೃತ್ತಿಯ ಬಗ್ಗೆ ಮಾತೇ ಆಡಲಿಲ್ಲ. 'ಯಾವತ್ತಾದರೂ ನಿವೃತ್ತಿ ಆಗಲೇಬೇಕು ತಾನೇ? ನನ್ನ ನಿವೃತ್ತಿ ಹತ್ತಿರ ಬಂದಿದೆ ಎನ್ನುವುದು ನನಗೂ ಗೊತ್ತಿದೆ' ಎಂದು ಕಳೆದ ವರ್ಷ ಒಮ್ಮೆ ದೋನಿ ಹೇಳಿದ್ದುಂಟು.

ಇದೀಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹಠಾತ್ತಾಗಿ ದೋನಿಯನ್ನು ಕೇಂದ್ರ ಕಾಂಟ್ರಾಕ್ಟ್ ಪಟ್ಟಿಯಿಂದ ಕೈಬಿಟ್ಟಿದೆ. ಆಟಗಾರರಿಗೆ ಗ್ರೇಡ್ ಕೊಟ್ಟು ಬಿಸಿಸಿಐ ಪ್ರಕಟಿಸಿದ ಪಟ್ಟಿಯಲ್ಲಿ ದೋನಿ ಹೆಸರಿಲ್ಲ. ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ಜಸ್‌ಪ್ರೀತ್ ಬೂಮ್ರಾ ಹಿರಿಯ ಆಟಗಾರರ ಪಟ್ಟಿಯಲ್ಲಿದ್ದು ವರ್ಷಕ್ಕೆ ₹ 7 ಕೋಟಿ ಸಂಭಾವನೆ ಪಡೆಯಲಿದ್ದಾರೆ. ವರ್ಷಕ್ಕೆ ₹ 5 ಕೋಟಿ ಪಡೆಯುವ ಗ್ರೇಡ್ ಎ ಆಟಗಾರರ ಪಟ್ಟಿಯಲ್ಲಿ 2019ರಲ್ಲಿ ದೋನಿ ಹೆಸರಿತ್ತು. ಈಗ ಆ ಪಟ್ಟಿಯಲ್ಲಿ ಅಶ್ವಿನ್, ಜಡೇಜಾ, ಭುವನೇಶ್ವರ್, ಚೇತೇಶ್ವರ್, ಅಜಿಂಕ್ಯಾ, ಶಿಖರ ಧವನ್ ಮುಂತಾದವರ ಹೆಸರಿದೆ. ಗ್ರೇಡ್ ಬಿ ಮತ್ತು ಸಿ ಯಲ್ಲೂ ದೋನಿ ಹೆಸರಿಲ್ಲ.



ಈ ನಿರ್ಧಾರ ಕೈಗೊಂಡ ಸಭೆಯಲ್ಲಿ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿಯೂ ಇದ್ದರು. 'ಬಿಸಿಸಿಐ ಕಾಂಟ್ರಾಕ್ಟ್ ಪಟ್ಟಿಯಲ್ಲಿ ಹೆಸರು ಇರಬೇಕಾದರೆ ಆ ಆಟಗಾರ ಪ್ರಸಕ್ತ ಸೀಸನ್‌ನಲ್ಲಿ ಹತ್ತು ಟಿ20, ಎಂಟು ಏಕದಿನ ಅಥವಾ ಮೂರು ಟೆಸ್ಟ್ ಪಂದ್ಯಗಳಲ್ಲಿ ಆಡಿರಬೇಕು ಎನ್ನುವುದು ನಿಯಮ. ದೋನಿ ಈ ಯಾವುದೇ ತರಹದ ಕ್ರಿಕೆಟ್‌ನಲ್ಲಿ ಕಳೆದ ಆರು ತಿಂಗಳಲ್ಲಿ ಆಡಿಲ್ಲವಾದ್ದರಿಂದ ಅವರ ಹೆಸರನ್ನು ಪಟ್ಟಿಗೆ ಪರಿಗಣಿಸುವ ಪ್ರಶ್ನೆಯೇ ಬರಲಿಲ್ಲ' ಎನ್ನುವುದು ಬಿಸಿಸಿಐ ಮೂಲಗಳ ವಿವರಣೆ. ಭಾರತ ಕ್ರಿಕೆಟ್ ತಂಡದ ಅತ್ಯಂತ ಯಶಸ್ವೀ ನಾಯಕ ಎನ್ನಿಸಿಕೊಂಡಿರುವ ದೋನಿಗೆ ಈ ನಿಯಮದಿಂದ ವಿನಾಯ್ತಿ ನೀಡಬಹುದಿತ್ತೆ? ಬಿಸಿಸಿಐ ಮನಸ್ಸು ಮಾಡಿದರೆ ನೀಡಬಹುದಿತ್ತು. ಆದರೆ ಸೌರವ್ ಗಂಗೂಲಿ ಹಾಗೂ ಕಾರ್ಯದರ್ಶಿ ಜಯ್ ಷಾಗೆ ಆ ಮನಸ್ಸು ಇರಲಿಲ್ಲ.

ಕಳೆದ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಆಡಿದ್ದ ಸೆಮಿಫೈನಲ್ ಪಂದ್ಯವೇ ದೋನಿ ಆಡಿರುವ ಕೊನೆಯ ಪಂದ್ಯ. ಸೆಮಿಫೈನಲ್‌ನಲ್ಲಿ ಸೋತು ಕೊಹ್ಲಿ ನೇತೃತ್ವದ ಭಾರತ ತಂಡ ವಿಶ್ವಕಪ್‌ನಿಂದ ಹೊರಬಿದ್ದಿತ್ತು. ಆ ಬಳಿಕ ಪಂದ್ಯಗಳಿಂದ ದೂರ ಉಳಿದಿರುವ ದೋನಿ, ಆಗಸ್ಟ್‌ನಲ್ಲಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಲೂ ಹೋಗಿದ್ದರು. ವರ್ಷದ ಕೊನೆಗೆ ಅಮೆರಿಕ ಪ್ರವಾಸದಲ್ಲಿ ಬ್ಯುಸಿ ಇದ್ದರು.

ಆಶ್ಚರ್ಯದ ಸಂಗತಿಯೊಂದಿದೆ. ಭಾರತ ತಂಡದ ಕೋಚ್ ರವಿಶಾಸ್ತ್ರಿ ಕಳೆದ ವಾರ ಹೇಳಿಕೆಯೊಂದನ್ನು ನೀಡಿ, 'ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ತಂಡಕ್ಕೆ ದೋನಿ ಸೇರ್ಪಡೆಯನ್ನು ತಳ್ಳಿ ಹಾಕಲಾಗದು' ಎಂದಿದ್ದರು. ಆ ಹೇಳಿಕೆಯ ಮರುದಿನವೇ ದೋನಿಯನ್ನು ಬಿಸಿಸಿಐ ಕಾಂಟ್ರಾಕ್ಟ್ ಪಟ್ಟಿಯಿಂದ ಕೈಬಿಡುವ ನಿರ್ಧಾರ ಕೈಗೊಳ್ಳಲಾಗಿದೆ! ಹಾಗಿದ್ದರೆ ಟಿ20 ವಿಶ್ವಕಪ್‌ನಲ್ಲಿ ದೋನಿ ಆಡುವುದು ಸಾಧ್ಯವಿಲ್ಲವೆ?

ಟಿ20 ಮತ್ತು ಏಕದಿನ ಪಂದ್ಯಗಳಲ್ಲಿ ದೋನಿಯ ಅನುಭವ ಭಾರತ ತಂಡಕ್ಕೆ ಇವತ್ತಿಗೂ ಅತ್ಯಗತ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಳೆದ ಸಲ ಏಕದಿನ ವಿಶ್ವಕಪ್‌ನಲ್ಲಿ ನಾಯಕ ವಿರಾಟ್ ಕೊಹ್ಲಿಗೆ ನಿರ್ಣಾಯಕ ಸಂದರ್ಭಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ದೋನಿಯೇ ನೆರವಾಗುತ್ತಿದ್ದುದು ಆಟ ನೋಡಿದವರಿಗೆಲ್ಲ ಗೊತ್ತು. 14 ವರ್ಷಗಳ ತನ್ನ ಸುದೀರ್ಘ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನದಲ್ಲಿ ಭಾರತಕ್ಕೆ ಬಹುತೇಕ ಎಲ್ಲ ಪ್ರಮುಖ ಕಪ್‌ಗಳನ್ನು ಅವರು ಗೆದ್ದುಕೊಟ್ಟಿದ್ದಾರೆ. 2011ರ ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ ಮತ್ತು ಟಿ20 ವಿಶ್ವಕಪ್ ಭಾರತದ ಮುಡಿಗೇರಿದಾಗ ದೋನಿಯೇ ತಂಡದ ಕಪ್ತಾನ ಆಗಿದ್ದರು. ಟೆಸ್ಟ್ ಕ್ರಿಕೆಟ್‌ನಿಂದ 2014ರ ಡಿಸೆಂಬರ್‌ನಲ್ಲೇ ನಿವೃತ್ತಿಯಾಗಿದ್ದಾರೆ. 2017ರ ಜನವರಿಯಲ್ಲಿ ಭಾರತದ ಟಿ20 ತಂಡದ ನಾಯಕತ್ವ ಬಿಟ್ಟುಕೊಟ್ಟರು. ಈಗ ಟಿ20 ವಿಶ್ವಕಪ್‌ನಲ್ಲಿ ಆಡುವ ಅವರ ಆಸೆ ಕೈಗೂಡಬಹುದೆ?

ಟಿ20 ವಿಶ್ವಕಪ್‌ನಲ್ಲಿ ಆಡುವ ತನ್ನ ಆಸೆಯನ್ನು ಕೈಬಿಟ್ಟು ದೋನಿ ಸ್ವತಃ ನಿವೃತ್ತಿಯನ್ನು ಘೋಷಿಸಬಹುದೆ ಎನ್ನುವ ಪ್ರಶ್ನೆಯೂ ಈಗ ಚರ್ಚೆಯಾಗುತ್ತಿದೆ. ಐಪಿಎಲ್‌ನಲ್ಲಿ ದೋನಿ ಆಡುವುದಂತೂ ಖಚಿತ. ಐಪಿಎಲ್ ಸೀಸನ್ ಆರಂಭವಾದಂದಿನಿಂದಲೂ ದೋನಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ. ಈ ತಂಡದ ಒಡೆತನ ಇಂಡಿಯಾ ಸಿಮೆಂಟ್ಸ್ ಕಂಪನಿಯದ್ದು. ದೋನಿ ಆ ಕಂಪನಿಯ ಉಪಾಧ್ಯಕ್ಷರೂ ಹೌದು. ಬಿಸಿಸಿಐ ನಿರ್ಧಾರ ಹೊರಬಿದ್ದ ಬಳಿಕ ದೋನಿ ಯಾವ ಪ್ರತಿಕ್ರಿಯೆಯನ್ನೂ ನೀಡಿಲ್ಲ. ಬಿಸಿಸಿಐಯ ಪದಾಧಿಕಾರಿಯೊಬ್ಬರು ಕಾಂಟ್ರಾಕ್ಟ್‌ನಿಂದ ತೆಗೆದುಹಾಕುವ ನಿರ್ಧಾರದ ಬಗ್ಗೆ ದೂರವಾಣಿಯಲ್ಲಿ ಮೊದಲೇ ತಿಳಿಸಿದ್ದರು. ಆಗಲೂ ಫೋನ್ ಸ್ವೀಕರಿಸಿದ ದೋನಿ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65